'ಫೋನ್ ಮಾಡು ಪ್ಲೀಸ್' ಎಂದಿದ್ದ ಒಕ್ಕಣೆಯನ್ನು, ತಕ್ಷಣ ಓದಿಹೇಳಿದ ಕುಂದಗೌರಿಗೆ, 'ಅರ್ಧ ಗಂಟೆ ತಡೆದು ಮಾಡುತೀನಿ – ಅಂತ ಕಳಿಸು ಪ್ಲೀಸ್' ಎಂದು ಹೇಳಿ, ಪುನಃ 'ಮಹಾಲಯ' ಅಮಾವಸ್ಯೆ – ಪ್ರಯುಕ್ತದ ಪಿತೃಕೈಂಕರ್ಯದಲ್ಲಿ ತೊಡಗಿಕೊಂಡೆ. ಮನೆಯ ಪುರೋಹಿತನ ಮುಖೇನ, ಸವ್ಯಾಪಸವ್ಯಗಳೆಂದು ಹತ್ತೆಂಟು ಮಂತ್ರೋಚ್ಚಾರಣೆಯ ನಡುವೆ, ಈ ಪರಿಯ ತಿಲಾಂಜಲಿಯ ಕೆಲಸ ಮುಗಿಸುವ ಹೊತ್ತಿಗೆ – ಶರ್ಲೀ ವರ್ಕ ಇನ್ನೂ ಎರಡು ಮೆಸೇಜು ಕಳಿಸಿದ್ದಳು. 'ಓಕೆ...' ಎಂಬುದರ ಹಿಂದೆಯೇ, 'ಬಟ್ ಆದಷ್ಟು ಬೇಗ...' ಎಂದು ಇನ್ನೂ ಒಂದನ್ನು ಕೀಲಿಸಿ ಕಳಿಸಿದ್ದಳು.

ಈ ಎರಡೂ ಮೆಸೇಜಗಳನ್ನು, ನನ್ನ ಹೆಂಡತಿ ಕುಂದಗೌರಿಯೇ ತಕ್ಷತಕ್ಷಣ ಓದಿ ಒಪ್ಪಿಸಿದಳು. ನಾನೆಲ್ಲಿ ಫೋನಿಗೆ ಕೈಯಿಕ್ಕಿ ಮಡಿ ತಪ್ಪುವೇನೋ – ಎಂಬ ಆತಂಕ ಹೆಣ್ಣಿಗೆ! ಎಷ್ಟಾದರೂ ಹೆಂಡತಿಯಲ್ಲವೇ?! 'ಇದಕ್ಕೇ ಹೇಳಿದ್ದು – ಫೋನ್ ಆಫ್ ಮಾಡಿಕೊಳ್ಳಿ ಅಂತ... ಸುಮ್ಮನೆ ಆ ಕೈ ಈ ಕೈ ಆಗಿಬಿಡುತ್ತೆ...' ಎಂದು, ಹಿಂದೆಯೇ ಸಣ್ಣದೊಂದು ಪಿರಿಪಿರಿಯನ್ನೂ ಸುರುಹಚ್ಚಿಕೊಂಡಳು. 'ಮಾಡೋದೊಂದು ವರ್ಷಾವರಿ ಕೆಲಸ... ಶ್ರಾದ್ಧ ಅಂದರೆ ಶ್ರದ್ಧೆಯಿಂದ ಮಾಡೋ ಅಂಥದ್ದು ಅನ್ನೋ ಅರ್ಥ. ಕೇಳಿ ನೋಡಿ – ಬೇಕಾದರೆ' ಎಂದು ನನ್ನ ಬದಿಗೆ ಕುಳಿದಿದ್ದ ಪುರೋಹಿತನತ್ತಲೇ ನೋಡಿಕೊಂಡು, ಅವನೂ ತನ್ನ ಈ ಮಾತನ್ನು ಅನುಮೋದಿಸಿಯಾನೆಂಬ ಉಮೇದಿನಲ್ಲಿ ಹೇಳಿದಳು. 'ನಿಮಗೋ ನೂರಾರು ಉಸಾಬರೀಪ್ಪ... ಛೇ...' ಅಂತಲೂ ಕನಲಿದಳು.

ಕುಂದಗೌರಿಯ ಇರಿಸುಮುರಿಸನ್ನು ಕಣ್ಣಿನಲ್ಲೇ ಅಳೆದು ನೋಡಿಕೊಂಡ ಪುರೋಹಿತ, 'ಏನು ಮಾಡೋಕಾಗುತ್ತೆ, ತಾಯೀ... ಎಲ್ಲ ಹಳೇಕಾಲದ ನೇಮ. ಎಷ್ಟಾಗುತ್ತೋ ಅಷ್ಟು ನಡೆಸೋದು ಅಷ್ಟೇ!' ಎಂದು ತನ್ನಷ್ಟಕ್ಕೇ ಸಮಜಾಯಿಷಿ ಹೇಳಿ ನಕ್ಕ. 'ಅದೂ ಅಲ್ಲದೆ ಈಗಿನ ಕಾಲದಲ್ಲಿ ಸಂಬಂಧ ನಿಭಾಯಿಸೋದುಂಟೆ? ಹಿಂದಿನ ಕಾಲಕ್ಕೆ ಜನ ಕೂಡುಕುಟುಂಬದಲ್ಲಿರೋರು... ಇಲ್ಲಾ, ಅಣ್ಣತಮ್ಮದಿರೆಲ್ಲ ಒಂದೇ ಊರಲ್ಲಿರೋರು... ಹೋಗಿಬಂದು ಮಾಡೋದಿರುತಿತ್ತು. ಹಾಗಾಗಿ ಸಂಬಂಧ ಉಳಿಕೊಂಡಿರೋದು. ಇವೊತ್ತು ಇದೆಲ್ಲ ಎಲ್ಲಿ ಸಾಧ್ಯ?'

'ನೀವು ಹೇಳೋದೂ ಸರಿ, ಭಟ್ಟರೇ...' ಎದುರಿಗೇ ಕುಳಿತು ನನ್ನ ಮತ್ತು ಕುಂದಗೌರಿಯ ಕೆಲಸದ ಮೇಲುಸ್ತುವಾರಿ ಕೈಕೊಂಡಿದ್ದ ನನ್ನ ಅಮ್ಮ, ಇದ್ದಕ್ಕಿದ್ದಂತೆ ಮಾತಿಗೆ ತೊಡಗಿಬಿಟ್ಟಳು. 'ಈ ಬದರೀನಾಥಯ್ಯ – ಅಂದೆವಲ್ಲ ನಮ್ಮ ಯಜಮಾನರ ಕೊನೆಯ ತಮ್ಮ. ಆರು ತಿಂಗಳಾಯಿತು, ಹೋಗಿ... ಯಾರಿಗೂ ಸಂಬಂಧವೇ ಇಲ್ಲದ ಸಾವಾಗಿ ಹೋಯಿತು ಕಣ್ರೇ! ಒಂಥರ ಬದುಕೂ ಕೂಡ ದುರಂತವೇ ಆಗಿಹೋಯಿತು...' – ಹೀಗೆಲ್ಲ, ನನ್ನ ಅಮ್ಮ, ಬದರೀ–ಅಂಕಲ್ ಕುರಿತು ಇಲ್ಲಸಲ್ಲದ ಕತೆಗೆ ತೊಡಗಿದ್ದೇ ತಡ, 'ಶ್ಶ್...' ಅಂತ ಸದ್ದು ಮಾಡಿ ಸುಮ್ಮನಿರಹೇಳಿದೆ. 'ಸಾಕು, ಸುಮ್ಮನಿರಮ್ಮ...' ಎಂದು ಬಾಯಿಬಿಟ್ಟೂ ತಿಳಿಸಿದೆ.

ಕೇಳುತ್ತಾಳೆಲ್ಲಿ? ವರಸೆ ಮುಂದುವರೆಸಿದಳು.

ಇನ್ನು, 'ದುರಂತದ ಬದುಕು!' ಎಂಬುದು ಕಿವಿಗೆ ಬಿದ್ದಿದ್ದೇ ಪುರೋಹಿತನ ಕಿವಿ ನಿಮಿರಿಕೊಂಡಿರಲು ಸಾಕು! 'ಏನಾಗಿತ್ತೊ?' ಅಂತಂದು ಒಳಗಿನ ಕುತೂಹಲವನ್ನು ಹೊರಗೆಡಹಿ ಕೇಳಿದ.

'ಏನಾಗಲಿಲ್ಲ ಅಂತ ಕೇಳಿ – ಭಟ್ಟರೇ...' ಅನ್ನುತ್ತ ಅಮ್ಮ, ತನ್ನ ಮೋರೆಯಲ್ಲಿನ ಸುಕ್ಕುಸುಕ್ಕಿನಲ್ಲೂ ತನ್ನ ಕಡೆಯ ಮೈದುನನ ದುರಂತದ ನೆರಳು ತಾಳಿಕೊಂಡು, ಪ್ರಕಾಂಡವಾದ ಕಥನಕ್ಕೇ ತೊಡಗಿಬಿಟ್ಟಳು. 'ಬದರೀ ಇಲ್ಲೇ ಸಂಗಮ್ ಸರ್ಕಲಿನಲ್ಲಿ ಒಂದು ಅಪಾರ್ಟ್‌ಮೆಂಟಿನಲ್ಲಿದ್ದ. ಎರಡು ಹೆಣ್ಣು ಮಕ್ಕಳು. ಇಬ್ಬರೂ ಅಮೆರಿಕದಲ್ಲಿದ್ದಾರೆ... ಗಂಡಹೆಂಡತಿ ಇಬ್ಬರೇ ಇಲ್ಲಿ ಇರೋರು. ವರ್ಷಕ್ಕೊಂದು ಸಲ ಮಕ್ಕಳ ಮನೆಗೆ ಹೋಗಿ – ಅಲ್ಲಿ ಆರು ತಿಂಗಳು, ಇಲ್ಲಿ ಆರು ತಿಂಗಳು ಇರೋ ಪದ್ಧತಿ ಇತ್ತು... ವರ್ಷದ ಹಿಂದೆ, ಅಮೆರಿಕದಲ್ಲೇ ದೊಡ್ಡ ಮಗಳ ಮನೇಲಿ – ಇವನು ಬಚ್ಚಲುಮನೇಲಿ ಬಿದ್ದಿದ್ದಷ್ಟೇ ಅಂತೆ, ಮೈಯ